<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 439-25** **ಪಿಡಬ್ಲ್ಯೂ ಃ** <u>**1**</u>

**ಸಿಡಬ್ಲ್ಯೂ ಃ** <u>**1**</u>

ಸಾಕ್ಷಿದಾರರ ಹೆಸರು ಃ ಪ್ರಣವ ಕಠಾರಿಯಾ

ತಂದೆ ಹೆಸರು ಃ ಮನಸುಕಲಾಲ

ವಯಸ್ಸು ಃ 26 ವರ್ಷ

ಉದ್ಯೋಗ ಃ ಅಕೌಂಟ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣದ ಮೃತ ನಂದಾದೇವಿ ಜೈನ ರವರು ನನ್ನ ದೊಡ್ಡಮ್ಮನಾಗಬೇಕು. ಮೃತ ನಂದಾದೇವಿ ರವರು ನಮ್ಮ ಮನೆಯಲ್ಲಿ ಗೃಹ ಪ್ರವೇಶ ಇರುವುದರಿಂದ ತಿರುಪತಿಯಿಂದ ಬಂದಿದ್ದರು. ದಿಃ 26.08.2024 ರಂದು ನಮ್ಮ ಮನೆಯ ಗೃಹ ಪ್ರವೇಶ ಮುಗಿದಿದ್ದರಿಂದ ದಿಃ 27.8.2024 ರಂದು ತಮ್ಮ ಜೊತೆಗೆ ಬಂದಿದ್ದ ಅನಿತಾ ಎಂಬುವವರನ್ನು ರೇಲ್ವೆ ಸ್ಟೇಶನ್ ಗೆ ಬಿಟ್ಟು ಬರಲು ಅವರೊಂದಿಗೆ ರಾತ್ರಿ 9 ಗಂಟೆಗೆ ತರೆಳಿದ್ದು,ನಂತರ 10.20 ರ ಸುಮಾರಿಗೆ ಒಂದು ಫೋನ್ ಕರೆ ಬಂದಿದ್ದು, ನಿಮ್ಮ ಸಂಬಂಧಿಕರಿಗೆ ಅಪಘಾತ ವಾಗಿದೆ ಅಂತಾ ಹೇಳಿದರು. ಅಪಘಾತ ವು ರೇಲ್ವೆಸ್ಟೇಶನ್ ಬಳಿ ಇರುವ ಬಿ ಎಸ್ ಎನ್ ಎಲ್ ಕಚೇರಿ ಬಳಿ ಆಗಿದೆ ಅಂತಾ ಹೇಳಿದ್ದಾರೆ. ನಾನು ತಕ್ಷಣ ಸ್ಥಳಕ್ಕೆ ಹೋದೆನು. ಅಲ್ಲಿ ನಾನು ಹೋಗಿ ನೋಡಿದಾಗ ದೊಡ್ಡಮ್ಮ ಬಿದ್ದಿದ್ದಳು. ಅವರ ಕಾಲಿಗೆ ತೀವ್ರ ಸ್ವರೂಪದ ಗಾಯವಾಗಿತ್ತು. ಅಲ್ಲೆ ಒಂದು ಟಾಟಾ ಕಂಪನಿ ಟ್ರಕ್ ಇದ್ದು, ಅದರ ಚಾಲಕನು ಅಲ್ಲೆ ಇದ್ದನು. ನ್ಯಾಯಾಲಯದ ಮುಂದಿರುವ ಆರೋಪಿ ಈತನು ಆ ದಿನ ಆರೋಪಿಯಾಗಿದ್ದನು. ಆರೋಪಿ ವೇಗ ಹಾಗೂ ನಿರ್ಲಕ್ಷ್ಯತನದಿಂದ ವಾಹನ ಚಲಾಯಿಸಿಕೊಂಡು ಬಂದು ರಸ್ತೆ ತಿರುವಿನಲ್ಲಿ ಡಿಕ್ಕಿಪಡಿಸಿದ್ದಾನೆ ಅಂತಾ ಅಲ್ಲಿದ್ದವರು ಹೇಳಿದರು. ಅಂಬುಲೆನ್ಸದಲ್ಲಿ ಕಿಮ್ಸ ಆಸ್ಪತ್ರೆಗೆ ದೊಡ್ಡಮ್ಮನನ್ನು ಕಳಿಸಿಕೊಟ್ಟೆವು. ದಿಃ 28.8.2024 ರಂದು ಬೆಳಗಿನ 1 ಗಂಟೆಗೆ ಕಿಮ್ಸ ಆಸ್ಪತ್ರೆಯಲ್ಲಿ ಪೋಲಿಸರಿಗೆ ದೂರು ನೀಡಿದ್ದೇನೆ. ದೂರನ್ನು ನಿಪಿ.1 ಸಾಕ್ಷಿ ಸಹಿ ನಿಪಿ.1-ಎ ಎಂದು ಗುರುತಿಸಲಾಯಿತು.

ನಂತರ ಬೆಃ 9 ರಿಂದ 9.30 ಗಂಟೆವರೆಗೆ ಚಾಸಾ-2 ಹಾಗೂ 3 ರವರ ಸಮಕ್ಷಮ ನಾನು ಅಪಘಾತ ದ ಕುರಿತು ಮಾಹಿತಿ ಹೇಳಿ ತೋರಿಸಿದ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿದ್ದು, ಸದರಿ ಪಂಚನಾಮೆ ನಿಪಿ.2 ಎಂದು, ಸಾಕ್ಷಿ ಸಹಿ ನಿಪಿ.2-ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಪೊಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ದಿಃ 15.9.2024 ರಂದು ಗಾಯಾಳು ನಂದಾದೇವಿ ಜೈನ ರವರು ಸುಚಿರಾಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ್ದು, ಈ ಕುರಿತು ನಾನು ಪುನರ್ ಹೇಳಿಕೆ ನೀಡಿದ್ದೇನೆ. ಅಪಘಾತ ಪಡಿಸಿದ ವಾಹನವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಪೊಟೋವನ್ನು ನಿಪಿ.4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

ನಾನು ಅಕೌಂಟ ಕೆಲಸ ಮಾಡುತ್ತೇನೆ. ನನ್ನ ಮನೆ ಕೇಶ್ವಾಪೂರದಲ್ಲಿದೆ. ಅಪಘಾತ ನ್ನು ಯಾರು ನೋಡಿದರ್ದಾರೆಂದು ನನಗೆ ಖುದ್ದು ಗೊತ್ತಿಲ್ಲ. ಪೋಲಿಸರು ದೂರು ಕೊಡು ಅಂತಾ ಹೇಳಿಕ್ಕೆ ದೂರು ನೀಡಿದ್ದೇನೆ. ದೂರಿನಲ್ಲಿ ಬರೆದ ವಿಷಯ ಗೊತ್ತಿಲ್ಲ ಅಂದರೆ ಸರಿಯಲ್ಲ. ದೂರನ್ನು ಪೋಲಿಸರು ಬರೆದಿದ್ದಾರೆ. ನನಗೆ ಗಾಡಿ ನಂಬರ ಹೇಳಲು ಬರುವುದಿಲ್ಲ. ಆಸ್ಪತ್ರೆಯಲ್ಲಿ ದೂರು ನೀಡಿದ್ದೇನೆ. ರಮೇಶ ಭವನದಿಂದ ಅಪಘಾತ ದ ಸ್ಥಳ 2 ಕಿಮೀವಾಗುತ್ತದೆ. ನಾನು ಬೈಕಿನ ಮೇಲೆ ಸ್ಥಳಕ್ಕೆ ಬಂದಿದ್ದೆನು. ನನ್ನ ಜೊತೆಗೆ ನನ್ನ ಅಕ್ಕ ಪೂನಮ್ ಬಂದಿದ್ದರು. ದೂರಿನಲ್ಲಿ ನನ್ನ ಅಕ್ಕ ಬಂದ ಬಗ್ಗೆ ಬರೆಸಿಲ್ಲ. ನಂದಾದೇವಿ ಖಾಯಂ ವಿಳಾಸ ತಿರುಪತಿ, ಆಂಧ್ರಾ ರಾಜ್ಯ. ಯಾವ ಟ್ರೇನ್ ಗೆ ಬಿಡಲು ಹೋಗಿದ್ದರೆಂದು ಗೊತ್ತಿಲ್ಲ. ಹುಬ್ಬಳ್ಳಿಯರಸ್ತೆಗಳಲ್ಲಿ ತಗ್ಗುಗಳು ಇವೆ ಅಂದರೆ ಸರಿ, ಅದರ ಬಗ್ಗೆ ದೂರುಗಳು ಆಗಿವೆ ಅಂದರೆ ಸರಿ. ಬಿ ಎಸ್ ಎನ್ ಎಲ್ ಕಚೇರಿ ಬಳಿ ಸಾಕಷ್ಟು ಅಂಗಡಿಗಳು ಇವೆ ಅಂದರೆ ಸರಿ. ರಾತ್ರಿ 11 ಗಂಟೆವರೆಗೆ ಅಂಗಡಿಗಳು ತೆರೆದಿದ್ದವು ಅಂದರೆ ಸರಿಯಲ್ಲ. ಅಲ್ಲಿ ಬಸ್ ನಿಲ್ದಾಣವಿದೆ ಅಂದರೆ ಸರಿ. ಅಲ್ಲಿ ಜನರಿರುತ್ತಾರೆ ಅಂದರೆ ಸರಿ. ಕಾಮತ್ ಹೊಟೇಲ್ ತೆರೆದಿರುತ್ತದೆ ಅಂದರೆ ಸರಿಯಲ್ಲ. ಮಿಶ್ರಾ ಪೇಡಾ ಅಂಗಡಿ ರಾತ್ರಿ 11 ಗಂಟೆವರೆಗೆ ತೆಗೆದಿರುತ್ತದೆ ಅಂದರೆ ಸರಿಯಲ್ಲ. ಆಟೋ ನಿಲ್ದಾಣವಿದೆ ಅಂದರೆ ಸರಿಯಲ್ಲ. ಚೆಂದ್ರೆ ಬಸ್ ನಿಲ್ದಾಣವಿದೆ ಅಂದರೆ ಸರಿ. ಗದಗದಿಂದ ಅಂಡರ ಬ್ರಿಜ್ ಕೆಳಗಡೆ ಬಂದು, ಎಡಗಡೆಗೆ ಹೋದರೆ ರೇಲ್ವೆ ನಿಲ್ದಾಣ ರೋಡ, ಬಲಗಡೆಗೆ ಬಿ ಎಸ್ ಎನ್ ಎಲ್ ಕಚೇರಿ ಇದೆ ಅಂದರೆ ಸರಿ. ಅಲ್ಲಿ ರಸ್ತೆ ಹತ್ತಿರವಾಗಿದೆ ಅಂದರೆ ಸರಿಯಲ್ಲ.

ಹುಬ್ಬಳ್ಳಿಯ ಕಿತ್ತೂರ ಚೆನ್ನಮ್ಮ ಸರ್ಕಲ್ ದಿಂದ ಬಂದು ಅಂಬೇಡ್ಕರ ಭವನ ಸುತ್ತಿ ಬೇಂದ್ರೆ ನಿಲ್ದಾಣ ಕಡೆಗೆ ಬರಬೇಕಾಗುತ್ತದೆ ಅಂದರೆ ಸರಿ. ರಸ್ತೆ ತಿರುವು ಇರುವುದರಿಂದ ವಾಹನಗಳು ನಿಧಾವಾಗಿ ಹೋಗುತ್ತವೆ ಅಂದರೆ ಸರಿ. ಗದಗ ಕಡೆಯಿಂದ ಬರುವ ವಾಹನಗಳು ನಿಧಾನವಾಗಿ ಬರಬೇಕೆಂದರೆ ಸರಿ. ನಂದಾದೇವಿ ರವರಿಗೆ 65 ವರ್ಷ. ರಾತ್ರಿ ತೆಗ್ಗು ನೋಡಲಾರದೆ ಬಿದ್ದು, ನಂದಾದೇವಿಯರು ಗಾಯಪಡಿಸಿಕೊಡಿದ್ದಾರೆ ಅಂದರೆ ಸರಿಯಲ್ಲ. ವಾಹನಕ್ಕೂ ಹಾಗೂ ನಂದಾದೇವಿ ರವರ ಗಾಯಕ್ಕೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಯಾವುದೇ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ. ಅಪಘಾತ ದಿಂದ ಮರಣ ಹೊಂದಿಲ್ಲ ಅಂದರೆ ಸರಿಯಲ್ಲ. ಪರಿಹಾರಗೋಸ್ಕರ ಸುಳ್ಳು ದೂರು ನೀಡಿದ್ದೇವೆ ಅಂದರೆ ಸರಿಯಲ್ಲ. ನಾನು ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 439-25** **ಪಿಡಬ್ಲ್ಯೂ ಃ <u>2</u>**

**ಸಿಡಬ್ಲ್ಯೂ ಃ <u>3</u>**

ಸಾಕ್ಷಿದಾರರ ಹೆಸರು ಃ ಗಣೇಶ ಲೋಹರ

ತಂದೆ ಹೆಸರು ಃ ತುಳಸೀರಾಮ

ವಯಸ್ಸು ಃ 24 ವರ್ಷ

ಉದ್ಯೋಗ ಃ ವ್ಯಾಪಾರ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 28.8.2024 ರಂದು ಬೆಃ 9 ರಿಂದ 9.30 ರ ಅವಧಿಯಲ್ಲಿ ಹುಬ್ಬಳ್ಳಿಯ ರೇಲ್ವೆ ಸ್ಟೇಶನ್ ಬಳಿ ಇರುವ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಬಳಿ ಅಪಘಾತ ದ ಕುರಿತು ಚಾಸಾ-1 ರವರು ಘಟನೆ ಕುರಿತು ಮಾಹಿತಿ ನೀಡಿ, ತೋರಿಸಿದ ಸ್ಥಳದಲ್ಲಿ ನಿಪಿ.2 ರಂತೆ ಪಂಚನಾಮೆಗೆ ನನ್ನ ಸಹಿ ಪಡೆದು ನಿಪಿ.3 ರಂತೆ ಪೊಟೋ ತೆಗೆದಿದ್ದಾರೆ. ಸಾಕ್ಷಿ ಯೂ ನಿಪಿ.2 ರಲ್ಲಿರುವ ಸಹಿ ನೋಡಿಗುರುತಿಸಿದ್ದು ಅವುಗಳನ್ನು ನಿಪಿ.2-ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಿಪಿ.2 ರಲ್ಲಿರುವ ವಿಷಯ ಸ್ವಲ್ಪ ಇದೆ. ನಿಪಿ.2 ನ್ನು ಸ್ಥಳದಲ್ಲಿ ಬರೆದಿದ್ದಾರೆ. ನಾವು ಬರೆದುಕೊಟ್ಟಿಲ್ಲ. ಪಂಚಾಮೆ ಯಾರು ಬರೆದಿದ್ದಾರೆಂದು ಹೇಳಲಾಗುವುದಿಲ್ಲ. ಆ ಕಾಲಕ್ಕೆ ನಾನು, ಚಾಸಾ-1 ಹಾಗೂ ಪೋಲಿಸರು ಇದ್ದರು. ಇಷ್ಟು ಜನ ಬಿಟ್ಟರೆ ಬೇರೆ ಯಾರು ಇರಲಿಲ್ಲ. ಪಂಚನಾಮೆ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಗುನ್ನಾ ನಂಬರ ಗೊತ್ತಿಲ್ಲ. ದೂರು ನೀಡಿದ್ದಾರೆಂದು ಗೊತ್ತಿಲ್ಲ. ಪೋಲಿಸರು ಬರೆದ ನಂತರ ನಾನು ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ ಅಂದರೆ ಸರಿಯಲ್ಲ.

ಗಾಡಿ ನಂಬರ ಹಾಗೂ ಚೆಸ್ಸಿ ನಂಬರ ಹೇಳಲು ಬರುವುದಿಲ್ಲ. ಪಾನಿಪುರಿ ಅಂಗಡಿ ಚಾಸಾ-1 ರವರ ಮನೆ ಬಳಿ ಇದೆ ಅಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.